



**ಚುಕ್ಕಿ ಮದುವೆ ಪ್ರಸಂಗ**
**ಕಥಾಸಂಕಲನ**

ಪು: 164 ಬೆ: ₹ 150
ಪ್ರ: ದೇಸಿ ಪುಸ್ತಕ
ನಂ. 121, 13ನೇ ಮುಖ್ಯರಸ್ತೆ,
ಎಂ.ಸಿ. ಲೇಔಟ್,
ವಿಜಯನಗರ,
ಬೆಂಗಳೂರು – 560 040

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ನರೇಂದ್ರ ಪೈ

# ಸೂಕ್ಷ್ಮ ಪಲ್ಲಟಗಳ ಕಥಾನಕ

ಅಮರೇಶ ನುಗಡೋಣಿಯವರ 'ಚುಕ್ಕಿ ಮದುವೆ ಪ್ರಸಂಗ' ಮತ್ತು 'ದಡ ಸೇರಿಸು ತಂದೆ' ಕಥಾಸಂಗ್ರಹಗಳು ಒಂದರ ಬೆನ್ನಿಗೊಂದರಂತೆ ಬಂದರೂ ಇವೆರಡರ ನಡುವೆ ಇರುವ ಅಗಾಧವೆನ್ನಿಸುವಂಥ ಭಿನ್ನತೆ ಮತ್ತು ವೈಶಿಷ್ಟ್ಯ ಬೆರಗು ಹುಟ್ಟಿಸುತ್ತದೆ. 'ಮಣ್ಣು ಸೇರಿತು ಬೀಜ' ಸಂಕಲನದ ಕತೆಗಳಿಂದ ಹಿಡಿದು, 'ತಮಂಧದ ಕೇಡು', 'ಸವಾರಿ' ಮತ್ತು 'ಒಡಲ ಹಂಗು' ಸಂಕಲನದ ಕತೆಗಳನ್ನೂ ಗಮನಿಸುತ್ತ ಬಂದಾಗಲೂ 'ಚುಕ್ಕಿ ಮದುವೆ ಪ್ರಸಂಗ' ವಿಭಿನ್ನವಾಗಿಯೇ ನಿಲ್ಲುತ್ತದೆ. ನವ್ಯೋತ್ತರ ಕನ್ನಡದ ಪ್ರಮುಖ ಸಣ್ಣಕತೆಗಾರರಲ್ಲಿ ಒಬ್ಬರಾದ ಅಮರೇಶ ನುಗಡೋಣಿಯವರ ಈ ಸಂಕಲನದ ಬಗ್ಗೆ ವಿಶೇಷ ಗಮನ ಅಗತ್ಯವೆನ್ನಿಸುತ್ತದೆ.

ಕಥಾನಕಕ್ಕೆ ಹೆಚ್ಚು ಒತ್ತು ಕೊಟ್ಟು, ನಿರೂಪಣೆಯ ಲಯಕ್ಕೆ ವಿಶೇಷ ಪೋಷಣೆ ನೀಡಿ, ಅನುಭವದ ವಿವರಗಳ ಮೂಲಕವೇ ಪಂಚೇಂದ್ರಿಯಕ್ಕೆ ನಿಲುಕಬೇಕೆನ್ನುವಷ್ಟು ತಾಳ್ಮೆಯಿಂದ ಬರೆಯುವ ನುಗಡೋಣಿಯವರ ಕತೆಗಳು ಈ ಎಲ್ಲದರೊಂದಿಗೆ ತನ್ನ ಒಟ್ಟು ಆಕೃತಿಯಿಂದ ಹೊಸದೊಂದು ಬೆರಗು, ವಿಸ್ಮಯವನ್ನು ಕೊಡುತ್ತ ಓದುಗರ ಮನಸೆಳೆಯುತ್ತವೆ. ಹಾಗಾಗಿ ನುಗಡೋಣಿಯವರ ಕತೆಗಳಲ್ಲಿ ಕಥಾನಕ,